ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವಂಥ ಶಿಕ್ಷಕರನ್ನು ಯಾವ ಸಂದರ್ಭದಲ್ಲಿಯಾದರೂ ತೆಗೆಯುವುದಕ್ಕೆ ಅವಕಾಶ ಉಂಟು. ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಶಿಕ್ಷಕರ ನೇಮಕವಾಗುತ್ತದೆ, ಕಾನೂನು ಪ್ರಕಾರ ರೋಸ್ಟರ್ ಸಿಸ್ಟಂ ಪಾಲಿಸಬೇಕಾಗಿರುತ್ತದೆ. ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ರಿಸರ್ವೇಷನ್ ಇಡುವುದಕ್ಕೆ ಕಾನೂನಲ್ಲಿ ಅವಕಾಶ ಇಲ್ಲ.

ಶ್ರೀ ಬಿ. ಎ. ಉಪ್ಪಿನ.—ಅನೇಕ ವರ್ಷಗಳಿಂದ ಗುತ್ತಿಗೆ ಆಧಾರದಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಅದ್ಯತೆ ಕೊಡದಿದ್ದರೆ ಬಹಳ ಅನ್ಯಾಯವಾಗುತ್ತದೆ, ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಸರ್ವೋಚ್ಚ ನ್ಯಾಯಲಯದ ತೀರ್ಪಿನ ಪ್ರಕಾರ ಕಂಟ್ರಾಕ್ಟ್ ಎಂಪ್ಲಾಯಮೆಂಟ್‌ನಲ್ಲಿ ಕೆಲಸ ಮಾಡಿಂವವರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಎಲ್ಲ ಶಿಕ್ಷಕರನ್ನು ಖಾಯಂ ಮಾಡುತ್ತೀರಾ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ನಮಗೆ ತಿಳಿದಂತೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯ ತೀರ್ಪು ಕೊಟ್ಟಿದೆ. ಎಲ್ಲಾ ಇಲಾಖೆಗೂ ಅನ್ವಯಿಸುವ ವಿಚಾರ ಗೊತ್ತಿಲ್ಲ, ಹಾಗೆ ಇದ್ದರೆ ಅದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಅಧ್ಯಕ್ಷರು.—ಶ್ರೀ ತಿಪ್ಪೇಸ್ವಾಮಿ ಗೈರು ಹಾಜರಿ.

ಶ್ರೀ ಶೇಖರಪ್ಪಗೌಡ ಶಿರವಾಳ, ಗೈರು ಹಾಜರಿ.

ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ಕೇತಮಾರನಹಳ್ಳಿಯಲ್ಲಿರುವ ಮಾದರಿ ಪ್ರಾಥಮಿಕ ಶಾಲೆಗಳು

೧೬೧೮. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೇತಮಾರನಹಳ್ಳಿ ಮಾದರಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭ ಮಾಡಿ ಎಷ್ಟು ವರ್ಷಗಳಾದವು?

ಆ) ಅಲ್ಲಿ ಪ್ರಾಥಮಿಕ ಶಾಲೆಯಲ್ಲದೆ ಪ್ರೌಢಶಾಲೆ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಈ) ಈ ಶಾಲೆಯಲ್ಲಿ ಪಾಠ ನಡೆಸಲು ಕೊಠಡಿಗಳಿವೆ? ಹಾಗೂ ವಿದ್ಯಾರ್ಥಿಗಳಿಗೆ ಶೌಚ ಗೃಹವಿದೆಯೇ?

ಉ) ಈ ಸರ್ಕಾರಿ ಶಾಲೆಯಲ್ಲಿ ಕ್ರಮವಾಗಿ ವಿದ್ಯಾಭ್ಯಾಸ ಮಾಡಲು ಎಷ್ಟು ಕೊಠಡಿಗಳು ಬೇಕಾಗುತ್ತದೆ. ಸರ್ಕಾರದವರು ಇದನ್ನು ಕಟ್ಟಿಸಿಕೊಡಲು ಏನು ಕಾರ್ಯಕ್ರಮ ಕೈಗೊಳ್ಳುತ್ತಾರೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ವಯಸ್ಕರ ಹಾಗೂ ಪ್ರಾಥಮಿಕ ಶಿಕ್ಷಣ ಸಚಿವರು).—

ಅ) ೧೯೫೨ರಲ್ಲಿ ಪ್ರಾರಂಭವಾಗಿದ್ದು, ೩೪ ವರ್ಷಗಳು ತುಂಬಿದೆ.

ಆ) ಬಂದಿದೆ.

ಇ) ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳ ಸಂಖ್ಯೆ ೪೭೯.
ಪ್ರೌಢಶಾಲೆ ವಿದ್ಯಾರ್ಥಿಗಳ ಸಂಖ್ಯೆ ೨೦೪.

ಈ) ಕೊಠಡಿಗಳು ೧೦. ಶೌಚ ಗೃಹ ಇಲ್ಲ.

ಉ) ೧೭ ಕೊಠಡಿಗಳು ಬೇಕಾಗುತ್ತದೆ. ಮುಂದಿನ ಸಾಲಿನಲ್ಲಿ ಹಣ ಒದಗಿಸಿ ಹಂತಹಂತವಾಗಿ ಶಾಲಾ ಕೊಠಡಿಗಳ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು,

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ಶಾಲೆ ೩೪ ವರ್ಷಗಳ ಹಿಂದೆ ಪ್ರಾರಂಭವಾದಾಗ ಎಷ್ಟು ಕೊಠಡಿಗಳಿದ್ದವು. ಈಚೆಗೆ ಎಷ್ಟು ಕೊಠಡಿಗಳನ್ನು ಕಟ್ಟಿಸಲಾಗಿವೆ?

ಶ್ರೀ ಎಂ. ರಘುಪತಿ.—೩೪ ವರ್ಷಗಳ ಹಿಂದೆ ಪ್ರಾರಂಭವಾದಾಗ ೧೦ ಕೊಠಡಿಗಳು ಇದ್ದವು ಈಗಲೂ ಅಷ್ಟೇ ಇವೆ.

ಶ್ರೀ ಎಂ. ಎಸ್. ಕೃಷ್ಣನ್ —೩೪ ವರ್ಷಗಳ ಹಿಂದೆ ಇದ್ದಂತಹ ವಿದ್ಯಾರ್ಥಿಗಳ ಸಂಖ್ಯೆಗಿಂತ ಇಂದಿನ ಮಂಜೂರಾತಿ ಮೇಲೆ ಜಾಸ್ತಿಯಾಗಿದೆ. ಆದರೆ ಸಂಮಾರು ೬೦೫ ವಿದ್ಯಾರ್ಥಿಗಳಿದ್ದಾರೆ, ೧೭ ಕೊಠಡಿಗಳನ್ನು ಕಟ್ಟಲಾಗುವುದೆಂದು ತಿಳಿಸಿದ್ದೀರಿ, ಇವು ಸಾಕಾಗುತ್ತವೆಯೆ? ೧೭ ಕೊಠಡಿಗಳನ್ನು ಎಷ್ಟು ತಿಂಗಳಲ್ಲಿ, ಎಷ್ಟು ವರ್ಷಗಳಲ್ಲಿ ಕಟ್ಟಿಸಿ ಕೊಡುತ್ತೀರಿ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಕೊಠಡಿಗಳನ್ನು ಒಂದೇ ಸಾರಿ ಕಟ್ಟಿಸುವುದಕ್ಕೆ ಹಣದ ಅಭಾವ ಇರುವುದು ಎಲ್ಲರಿಗೂ ಗೊತ್ತಿದೆ. ನಿನ್ನೆ ತಾನೇ ನಾನು ನನ್ನ ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಾ ಹೇಳಿದ್ದೇನೆ. ಈ ವರ್ಷ ೪ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಕನಿಷ್ಟ ಈ ವರ್ಷ ೫–೬ ಕೊಠಡಿಗಳನ್ನು ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಶೌಚಗೃಹ ಮಾತ್ರ, ತುರ್ತಾಗಿ ಕಟ್ಟಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಎನ್. ಎಚ್. ಕೌಜಲಗಿ, ಗೈರು ಹಾಜರಿ.

ಸಮಗ್ರ ಅಭಿವೃದ್ಧಿ ಸೇವೆಗಳ ಮೇರೆಗೆ ಅನುದಾನ

೫೬೪. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ೧೯೮೫–೮೬ ಸಾಲಿನಲ್ಲಿ ಕೇಂದ್ರ ಸರಕಾರದಿಂದ ರೂ. ೭,೫೦,೦೦,೦೦೦ ಒದಗಿಸಲಾಗಿದೆಯೇ ?

ಆ) ಈ ಯೋಜನೆಯಡಿ ಸಿದ್ಧಪಡಿಸುವುದು ಮತ್ತು ಅನುಮೋದಿತ ಯೋಜನೆಗಳಿಗೆ ಮಾತ್ರ ಖರ್ಚು ಮಾಡಲ್ಪಡುವ ಬಗ್ಗೆ.

ಶ್ರೀ ಬಿ.ಆರ್. ಯಾವಗಲ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು).—

ಅ) ಕೇಂದ್ರ ಸರಕಾರವು ರೂ. ೮೬೫.೨೯ ಲಕ್ಷ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ೧೯೮೫–೮೬ ಸಾಲಿಗೆ ಹಣ ಒದಗಿಸಿದೆ.

ಆ) ಭಾರತ ಸರಕಾರದ ಆದೇಶದ ಮೇರೆಗೆ ಈ ಯೋಜನೆ ಕಾರ್ಯಾಚರಣೆಯಲ್ಲಿದ್ದು ಕೇವಲ ಅನುಮೋದಿತ ಯೋಜನೆಗಾಗಿ ಖರ್ಚು ಮಾಡಲು ಹಣ ಒದಗಿಸಲಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ, ೮ ಕೋಟಿ, ೬೫ಲಕ್ಷ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ೫೦ ಭಾಗ ಗ್ರಾಂಟ್ ಕೊಡುತ್ತಾರೆ. ಐ ಆರ್ ಡಿ ಪಿ ಯೋಜನೆ ಮೂಲಕ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದೀರಿ ? ಕೇಂದ್ರ ಸರ್ಕಾರ ಹಾಕಿದ ಯೋಜನೆಗಳಿಗೆ ತದ್ವಿರುದ್ಧವಾಗಿ ಯೋಜನೆಗಳನ್ನು ಹಾಕಿಕೊಂಡಿದ್ದೀರಾ ? ನಿಮ್ಮದೇ ಆದಂಥ ಯೋಜನೆಗಳನ್ನು ಎಷ್ಟು ಹಾಕಿಕೊಂಡಿದ್ದೀರಿ ? ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಿದ್ದಾರಿ?

ಶ್ರೀ ಬಿ.ಆರ್. ಯಾವಗಲ್.—ಅಧ್ಯಕ್ಷರೇ, ಇದು ಕೇಂದ್ರದ ಪುರಸ್ಕೃತ ಯೋಜನೆ. ೧೭.೨೬ ಲಕ್ಷ ಖರ್ಚು ಮಾಡಬೇಕಾಗಿರುವ ರೂ. ಗಳಲ್ಲಿ ಪೈಮರಿ, ಸೆಕಂಡರಿ ಹೀಗೆ ಬೇರೆ ಬೇರೆ ಸೂಚನೆಗಳನ್ನು ಕೇಂದ್ರ ಕೊಟ್ಟಿದೆ. ಅದಕ್ಕನುಗುಣವಾಗಿ ಜಿಲ್ಲಾಭಿವೃದ್ಧಿ ಸಂಸ್ಥೆಗಳು ಅವುಗಳನ್ನೆಲ್ಲಾ ಯೋಜನೆ ಮಾಡಿ ರಾಜ್ಯ ಪುಟ್ಟಿದ ಒಂದು ಕನ್‌ಸಲ್ಟೇಟಿವ್ ಕಮಿಟಿಗೆ ಕಳಿಸುತ್ತಾರೆ. ಅಲ್ಲಿ ಅದು ಮಂಜೂರಾತಿ ಪಡೆದು